# ಇಬ್ಬಗೆ

ನಮ್ಮ ಮನಸ್ಸು ಕೆಲಸ ಮಾಡುವ ರೀತಿ– ತುಸು ವಿಲಕ್ಷಣವಾದುದೆನಿಸುತ್ತದೆ. 'ಏರುವುದು' ಎನ್ನುವ ಪದ ಕಿವಿಗೆ ಬಿದ್ದಾಗ ಮೇಲೇರುವಿಕೆ ಎಂಬ ಅರ್ಥದ ಸೂಚನೆಯ ಜೊತೆಗೇ 'ಇಳಿಯುವುದು' ಎನ್ನುವ ಪದದ ನೆನಪನ್ನೂ ಅದು ಉಂಟು ಮಾಡುತ್ತದೆ! ಇಳಿಯುವುದು, ಏರುವಿಕೆಗೆ ವಿರೋಧವೆಂದು ಭಾವಿಸಿದೆವಾದರೆ ಆಗ ತನ್ನ ಸ್ವ–ಅರ್ಥವನ್ನು ಮಾತ್ರವಲ್ಲ ತನ್ನ ವಿರೋಧಾರ್ಥವನ್ನೂ ತಾನೇ ನೆನಪಿಸುತ್ತದೆ ಎಂದಾಯಿತು! ಅಂದರೆ–ವಿರೋಧವು ನಾವು ತಿಳಿದಂತೆ ಎಲ್ಲೋ ದೂರದಲ್ಲಿ ಇಲ್ಲ, ಬಹು ಹತ್ತಿರದಲ್ಲೇ ಇದೆ; ತನ್ನಲ್ಲಿಯೇ ಇದೆ ಎನ್ನಬಹುದು. ಬಹುತೇಕ ಎಲ್ಲ ಪದಗಳೂ ಹೀಗೆ ಸ್ವ–ವಿರೋಧವನ್ನು ಒಟ್ಟಿಗೇ ತಮ್ಮಲ್ಲಿಯೇ ಇಟ್ಟುಕೊಂಡಿವೆ. 'ಹುಟ್ಟು' ಎಂದಾಗ 'ಸಾವು' ಎಂಬ ಪದವನ್ನು ಬಳಸದೆಯೇ ಸಾವಿನ ನೆನಪಾಗುತ್ತದೆ. 'ಬಂಧನ' ಎಂದಾಗ 'ಬಿಡುಗಡೆ'ಯ ನೆನಪು. 'ಮಡಿ' ಎಂದಾಗ 'ಮೈಲಿಗೆ'ಯ ನೆನಪು. 'ಮೈ' ಎಂದಾಗ 'ಮನ'ದ ನೆನಪು. 'ಕಹಿ' ಎಂದಾಗ 'ಸಿಹಿ'ಯ ನೆನಪು. 'ಗಂಡು' ಎಂದಾಗ 'ಹೆಣ್ಣಿನ' ನೆನಪು. ಅಷ್ಟೇಕೆ? 'ನಾನು' ಎಂದಾಗ 'ನಿನ್ನ' ನೆನಪು! –ಹೀಗೆ ಅಸಂಖ್ಯ ಪದಗಳನ್ನು ಉದಾಹರಿಸಬಹುದು. ಅಂದಾಗ, ಇನ್ನೊಂದರ ನೆನಪನ್ನು ತನ್ನಲ್ಲಿ ಇಟ್ಟುಕೊಂಡೇ– ಸಾಪೇಕ್ಷವಾಗಿಯೇ ಶಬ್ದವು ಅರ್ಥವ್ಯಾಪಾರವನ್ನು ನಡೆಯಿಸುತ್ತದೆ ಎಂದಾಯಿತು. ಶಬ್ದಾರ್ಥ ವ್ಯಾಪಾರವೆಂದರೆ ಅದು ಮನೋವ್ಯಾಪಾರವೇ ಆಗಿದೆ. ಈ ವ್ಯಾರವನ್ನು 'ಸ್ವ–ವಿರೋಧ' ಎಂದು ಕೂಡ ಬಗೆಯಲಾಗದು. ತನ್ನಲ್ಲಿಯೇ ಇರುವ ಇನ್ನೊಂದರ ನೆನಪು ಸ್ವ–ವಿರೋಧವಾಗುವುದು ಹೇಗೆ? ಇದನ್ನು 'ಇಬ್ಬಗೆ'– 'ಇಮ್ಮುಖ' ಎನ್ನಬಹುದು. ರವೀಂದ್ರರು ಮನದ ಈ ಇಬ್ಬಗೆಯನ್ನು 'ಪತನ– ಉತ್ಥಾನೇರ್ ಬಂಧುರ ಪಂಥಾ' ಎಂದು ಮನೋಜ್ಞವಾಗಿ ಕರೆದಿದ್ದಾರೆ. ಕುಸಿತದ ಹಾದಿಯೂ ಇದೇ, ಕುಸಿತದಿಂದ ಮತ್ತೆ ಮೇಲೇಳುವ ಉತ್ಥಾನದ ಹಾದಿಯೂ ಇದೇ ಎಂದಿದ್ದಾರೆ. ಇಮ್ಮುಖವಿದ್ದರೂ ಬದುಕು ಒಂದೇ ಎಂದಿದ್ದಾರೆ. ದೇವರು ಒಬ್ಬನೇ ಎನ್ನುವ ಮಾತು ಬದುಕು ಒಂದೇ ಎಂದಂತೆ ಕವಿಗೆ ಕೇಳಿಸುತ್ತದೆ!

ಈ ಇಬ್ಬಗೆಯ ಅರಿವು ಆಧ್ಯಾತ್ಮಿಕವಾದ ಅರಿವೂ ಆಗಿದೆ. ನಿಜಕ್ಕಾದರೆ ಅಧ್ಯಾತ್ಮವೆಂದರೆ ನಮ್ಮೊಳಗೆ ನಡೆಯುತ್ತಿರುವ ನಮ್ಮ ಮನೋದೈಹಿಕವಾದ ಆಳವಾದ ವಿದ್ಯಮಾನಗಳ ಅರಿವು. ಈ ಅರಿವು, ನಮ್ಮೊಳಗಿನ ಇಬ್ಬಗೆಯನ್ನು ನಿರೂಪಿಸಲು ಜೀವ ಮತ್ತು ದೇವ ಎಂಬ ಎರಡು ಪರಿಕಲ್ಪನೆಗಳ ಮೂಲಕ ಯತ್ನಿಸುತ್ತದೆ. ಅಂದರೆ ಜೀವ–ದೇವ ಸಾಪೇಕ್ಷವಾಗಿವೆ. ಒಂದನ್ನು ಬಿಟ್ಟು ಇನ್ನೊಂದಿಲ್ಲ. ಇರಲಾರದು. ಹೀಗೆ ಸಂದಿಲ್ಲದೆ ಈ ಎರಡು ಜೊತೆಗೇ ಇದ್ದರೂ ಇವೆರಡರ ಸಾಪೇಕ್ಷತೆಯ ಸ್ವರೂಪ ತುಸು ವಿಲಕ್ಷಣವಾಗಿದೆ.

ಹೇಗೆಂದರೆ: ಮನುಷ್ಯ ಜೀವದ ಉದ್ಧಾರವಾಗಬೇಕಿದೆ ಎನ್ನೋಣ. ಅಂದರೆ ಈಗ ಇರುವಂತೆ, ಎಲ್ಲ ಬಗೆಯ ಮಿತಿಗಳ ನಡುವೆ ಬಳಲುತ್ತಿರುವುದು ಮನುಷ್ಯ ಜೀವದ ಆತ್ಯಂತಿಕ ಸ್ಥಿತಿಯಲ್ಲ. ಜೀವದ ಸಾಧ್ಯತೆ ಅಪಾರವಾಗಿದೆ. ಈ ಸಾಧ್ಯತೆ, ತನ್ನ ಈಗಣ ಸ್ಥಿತಿಗಿಂತ ಬದಲಾಗುವುದರಲ್ಲಿ ಅಡಗಿದೆಯಾಗಿ, ಈ ಬದಲಾವಣೆಯನ್ನು 'ಉದ್ಧಾರ' ಎನ್ನಲಾಗಿದೆ. ಮನುಷ್ಯ ಬದಲಾಗಬೇಕಿದೆ ಎಂದು ಎಲ್ಲರೂ ಒಪ್ಪುತ್ತಾರೆ. ಆದರೆ ಈ ಬದಲಾವಣೆ ಸಾಧ್ಯವಾಗುವುದು ಹೇಗೆ?

'ಉದ್ಧಾರ' ಎಂದೊಡನೆ 'ಅವರಣ'ದ ನೆನಪೂ ಉಂಟಾಗುತ್ತದೆ. ಉದ್ಧಾರ ಎಂದರೆ ಏರುವುದು. 'ಅವತರಣ' ಎಂದರೆ ಇಳಿಯುವುದು. ಕೆಳಗಿಳಿಯುವುದು. ಜೀವದ ಉದ್ಧಾರವಾಗಬೇಕಾದರೆ ದೇವರು ಕೆಳಗಿಳಿದು ಬರಬೇಕಂತೆ! ಇಳಿದು ಬರುತ್ತಾನಂತೆ! ಕೆಳಗಿಳಿದು ಬರಬೇಕಾದರೆ ಅವನು ಮೇಲೆ ಇರಬೇಕಷ್ಟೆ? ಮೇಲಿರುವವನು ತಾನೇ ದೇವರು! ಅಂಥ ದೇವರು, ತಾನು ಕೆಳಗಿಳಿದು ಬರುವ ಅಗತ್ಯವಿರದಿದ್ದರೂ, ಸರ್ವವ್ಯಾಪಿಯಾಗಿ ಎಲ್ಲೆಡೆ ಇರುವ ದೇವರಿಗೆ ಮೇಲೆ ಮೇಲೆ–ಕೆಳಗೆ ಎಂಬ ಭೇದವೇ ಇರದಿದ್ದರೂ, ಜೀವದ ಭಾವನೆಗೆ ಅನುಗುಣವಾಗಿ ತಾನು ಕೆಳಗಿಳಿದು ಬರುವಂತೆ ತೋರಿಸುವ ಅಗತ್ಯವಾದರೂ ಇದೆ. ಈ ತೋರಿಕೆಯ ಅಗತ್ಯವನ್ನೇ ತನ್ನ ನಿಜವಾದ ಅಗತ್ಯವನ್ನಾಗಿಸಿ– ಇದು ಮತ್ತಷ್ಟು ತನ್ನನ್ನು ಕುಗ್ಗಿಕೊಂಡಂತೆ– ದೇವರು ಇಳಿದುಬರುವುದನ್ನು 'ಅವತಾರ' ಎನ್ನಲಾಗಿದೆ. ತನ್ನ ಸ್ವಭಾವದಂತೆ ಕುಸಿದು ಬಿದ್ದಿರುವ ಮನುಷ್ಯಜೀವದ ಬಳಿಗೆ, ತನ್ನ ಸ್ವಭಾವಕ್ಕೆ ವಿರುದ್ಧವಾಗಿ ದೇವರು ಕೆಳಗಿಳಿದು ಬರುವ ಪರಿಕಲ್ಪನೆ ಇದು! ಅಂದರೆ ಮನುಷ್ಯ ತನ್ನನ್ನು ತಾನೇ ಮೀರುವುದಕ್ಕಾಗಿ, ತನ್ನ ಸಾಧ್ಯತೆಯನ್ನು ಕಂಡರಿಸುವುದಕ್ಕಾಗಿ, ದೇವರು ತೊಡುವ ವೇಷವಿದು– 'ಅವತಾರ!' ದೇವರನ್ನು ನೆನೆಯುವುದೆಂದರೆ ದೇವರು ಕೆಳಗಿಳಿದು ಬರುತ್ತಾನೆಂದು ನೆನೆಯುವುದು! ನಮ್ಮ ಬಳಿಗೆ ಬರಬೇಕಿದೆ ಎಂದು ಅವನು ಇಳಿಯುತ್ತಾನೆಂದು ನೆನೆಯುವುದು! ದೇವರಿಗೆ ನಾವು ಬೇಕಿದೆ, ಮನುಷ್ಯ' ದೇವರಿಗೆ ಪ್ರೀತಿಪಾತ್ರವಾದ ಜೀವವಾಗಿದೆ ಎಂದು ಹೀಗಾದರೂ ನೆನೆಯುವುದು! ದೇವರು ಇಳಿಯುವುದನ್ನು ನೆನೆಯುವುದರಲ್ಲಿ ಜೀವದ ಉದ್ಧಾರವು ಅಡಗಿದೆ ಎಂದು ಸೂಕ್ಷ್ಮವಾಗಿ ಅರಿಯುವುದು. ಈ ಅರಿವಿನಿಂದಾಗಿ ಮಾನವ ಹೃದಯ ತಾನು ಲೋಕ ಜೀವನದಲ್ಲಿ ಅನುಭವಿಸದ 'ಭಕ್ತಿ' ಎಂಬ ರಸಾನುಭವವನ್ನು ಮಾಡಿಕೊಳ್ಳುವುದು! ಇದನ್ನೇ ರವೀಂದ್ರರು 'ಪತನ ಉತ್ಥಾನೇರ್ ಬಂಧುರ ಪಂಥಾ' –ಎಂದು ಕರೆದುದಾಗಿರಬಹುದು.

■ **ತೋಷ**

## ಮಾತೇ ಮುತ್ತು

★ ಇವತ್ತು ಒಂದೇ ದಿನ ಉಳಿದಿರುವುದು, ನಿನ್ನೆ ಕಣ್ಮರೆಯಾಗಿದೆ.

–ಜಾನ್ ವುಡನ್

★ ಸಮಯವನ್ನು ಹೊಂದಿಸಿಕೊಳ್ಳುವುದಲ್ಲ, ನಮ್ಮನ್ನು ನಾವು ಹೊಂದಿಸಿಕೊಳ್ಳಬೇಕು.

–ಗಿಲಿಯನ್ ಬಟ್ಲರ್

★ ಯೋಚಿಸುವುದೆಂದರೆ ನಮ್ಮ ಆತ್ಮದ ಜತೆಗೆ ನಾವೇ ಮಾತನಾಡುವುದು.

–ಪ್ಲೇಟೋ

★ ಪುಸ್ತಕವೆಂದರೆ ನಿಮ್ಮ ಕೈಯಲ್ಲಿ ಹಿಡಿದುಕೊಂಡಿರುವ ಕನಸು.

–ನೀಲ್ ಗೈಮ್ಯಾನ್

★ ಯಶಸ್ಸು ಸದಾ ಇರಬೇಕೆಂದರೆ ವಿನಯದಿಂದಿರಿ. ಕೀರ್ತಿ ಅಥವಾ ಹಣ ತಲೆಗೆ ಹತ್ತದಂತೆ ನೋಡಿಕೊಳ್ಳಿ.

-ಎ.ಆರ್.ರೆಹಮಾನ್

★ ಪ್ರತಿಭೆಯಿಂದ ಪಂದ್ಯಗಳನ್ನು ಗೆಲ್ಲಬಹುದು, ಆದರೆ ತಂಡ ಪ್ರಯತ್ನ ಮತ್ತು ಬುದ್ಧಿವಂತಿಕೆಯಿಂದ ಚಾಂಪಿಯನ್‌ಶಿಪ್ ಗೆಲ್ಲಬಹುದು.

–ಮೈಕೆಲ್ ಜೋರ್ಡಾನ್

★ ಜೀವನದ ಭಯದಿಂದಲೇ ಸಾವಿನ ಭಯವೂ ಹುಟ್ಟುವುದು. ಜೀವನವನ್ನು ಸಂಪೂರ್ಣವಾಗಿ ಜೀವಿಸುವವನು ಸಾಯಲು ಸದಾ ಸಿದ್ಧನಾಗಿರುತ್ತಾನೆ.

-ಮಾರ್ಕ್ ಟ್ವೈನ್

★ ನಿಮಗೆ ಶತ್ರುಗಳಿದ್ದಾರಾ? ತುಂಬ ಒಳ್ಳೆಯದು. ಅದರ ಅರ್ಥ ಜೀವನದಲ್ಲಿ ನೀವು ಯಾವತ್ತೋ ಒಂದು ಸಲ ಒಳ್ಳೆಯದಕ್ಕಾಗಿ ಎದ್ದು ನಿಂತಿದ್ದೀರಿ.

-ವಿನ್‌ಸ್ಟನ್ ಚರ್ಚಿಲ್

★ ಬೆಂಕಿಯಿಲ್ಲದೆ ಮೇಣದಬತ್ತಿ ಉರಿಯುವುದಿಲ್ಲ. ಹಾಗೆಯೇ ಆಧ್ಯಾತ್ಮಿಕ ಜೀವನವಿಲ್ಲದೆ ಮನುಷ್ಯ ಬದುಕಲಾರ.

-ಗೌತಮ ಬುದ್ಧ

★ ಜೀವನದಲ್ಲಿ ಇರುವುದೇ ಒಂದು ಸಂತೋಷದ ಸಂಗತಿ. ಅದೆಂದರೆ ಪ್ರೀತಿಸಲ್ಪಡುವುದು ಮತ್ತು ಪ್ರೀತಿಸುವುದು.

-ಜಾರ್ಜ್ ಸ್ಯಾಂಡ್

★ ಬದಲಾವಣೆ ಬದುಕಿನ ನಿಯಮ. ಭೂತಕಾಲ ಮತ್ತು ವರ್ತಮಾನವನ್ನು ಮಾತ್ರ ನೋಡುವವರು ಭವಿಷ್ಯವನ್ನು ಕಳೆದುಕೊಳ್ಳುತ್ತಾರೆ.

-ಜಾನ್ ಎಫ್ ಕೆನೆಡಿ

★ ಶಿಕ್ಷಣ ಎನ್ನುವುದು ಅತ್ಯಂತ ಶಕ್ತಿಶಾಲಿ ಆಯುಧ. ಅದರ ಮೂಲಕ ಜಗತ್ತನ್ನು ಬದಲಿಸಬಹುದು.

-ನೆಲ್ಸನ್ ಮಂಡೇಲ